**ಪ್ರಧಾನ ಸಿವಿಲ್ ಮತ್ತು  ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ**

**ಸಿ.ಸಿ. ನಂ. 3553/2021**

| | | | |
|---|---|---|---|
| **ಹೆಸರು** | **:** | **ರಂಜಿತಾ** | **ಚಾಸಾ. 9** |
| **ಗಂಡನ ಹೆಸರು** | **:** | **ದತ್ತು** | **ಪ್ರಾ.ಸಾ. 3** |
| **ವಯಸ್ಸು** | **:** | **30 ವರ್ಷ** | **ದಿನಾಂಕಃ 15-07-2025** |
| **ಉದ್ಯೋಗ** | **:** | **ಅಬಕಾರಿ ನಿರೀಕ್ಷಕರು** | |
| **ವಾಸಸ್ಥಳ** | **:** | **ರಿಬ್ಬನಪಲ್ಲಿ** | |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ**

ದಿನಾಂಕಃ 05-08-2021 ರಿಂದ 17-09-2023 ರವರೆಗೆ ಅಬಕಾರಿ ನಿರೀಕ್ಷಕರಾಗಿ ಚಿಂಚೋಳಿಯಲ್ಲಿ ಕಾರ್ಯನಿರ್ವಹಿಸಿದ್ದೇನೆ.

ದಿನಾಂಕಃ 05-08-2021 ರಂದು ಪ್ರಕರಣದ ಕಡತವನ್ನು ಚಾಸಾ-6ರವರಿಂದ ಪಡೆದು ದಾಳಿಯಲ್ಲಿ ಬಾಗವಹಿಸಿದ ಚಾಸಾ-4, 7 ಮತ್ತು 8 ರವರ ಹೇಳಿಕೆಗಳನ್ನು ಪಡೆದಿದ್ದೇನೆ. ನಂತರ ತನಿಖೆ ಪೂರ್ಣಗೊಳಿಸಿ ದಿನಾಂಕ 10-08-2021 ರಂದು ಮಾನ್ಯ ನ್ಯಾಯಾಲಯಕ್ಕೆ ಅಂತಿಮ ವರದಿಯನ್ನು ಸಲ್ಲಿಸಿದ್ದೇನೆ.

**ಪಾಟೀ ಸವಾಲುಃ ಆರೋಪಿ ಪರವಾಗಿ ಶ್ರೀ  CGM ವಕೀಲರಿಂದಃ**

ಈ ಪ್ರಕರಣದ ಕಡತವನ್ನು ನಾನು ಪರಿಶೀಲಿಸಿದ್ದೇನೆ. ಚಂದಾಪುರದಲ್ಲಿ ಬಸವ ಪೆಟ್ರೋಲ್ ಪಂಪ ಇದೆ ಎಂದರೆ ಸರಿ. ಬಸವೇಶ್ವರ ವೃತ್ತ ಚಿಂಚೋಳಿಯಲ್ಲಿ ಇದೆ ಎಂದರೆ ಸರಿ. ನಾನು ತನಿಖೆ ಸಮಯಕ್ಕೆ ಘಟನಾ ಸ್ಥಳಕ್ಕೆ ಹೊಗಿಲ್ಲ ಎಂದರೆ ಸರಿ. ದ್ವಿಚಕ್ರ ವಾಹನ ಯಾರಿಗೆ ಸೇರಿದ್ದು ಎಂದು ನಾನು ತನಿಖೆ ಮಾಡಿಲ್ಲ. ಸಾಕ್ಷಿ ಮುಂದುವರೆದು ಅದನ್ನು ಚಾಸಾ-6ರವರು ತನಿಖೆ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ತನಿಖೆ ದಾಖಲೆಗಳನ್ನು ನಾನು ನೋಡಿದ್ದೇನೆ. ಚಾಸಾ-6 ರವರು ಸಲ್ಲಿಸಿದ ವಾಹನಕ್ಕೂ ಹಾಗೂ ಆರೋಪಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸಾಕ್ಷಿ ಆ ದಿನ ಆರೋಪಿಯೇ ಸದರಿ ವಾಹನವನ್ನು ಚಲಾಯಿಸುತ್ತಿದ್ದ ಎಂದು ನುಡಿಯುತ್ತಾರೆ. ನಾನು ಈ ಪ್ರಕರಣದಲ್ಲಿ ಯಾವುದೇ ತನಿಖೆ ಮಾಡಿಲ್ಲ ಎಂದರೆ ಸರಿ. ಈ ಪ್ರಕರಣದ ಕಡತವನ್ನು ನಾನು ಸಂಪೂರ್ಣವಾಗಿ ನೋಡಿಲ್ಲ ಎಂದರೆ ಸರಿಯಲ್ಲ. ನಾನು ಹಾಗೂ ನಮ್ಮ ಸಿಬ್ಬಂದಿ ಸೇರಿ ಆರೋಪಿಯ ವಿರುದ್ದ ಸುಳ್ಳು ಪ್ರಕರಣ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. ಆರೋಪಿಗೆ ಸಂಬಂಧವಿಲ್ಲದಿರುವ ವಾಹನವನ್ನು ಸೇರಿಸಿ ಸುಳ್ಳು ಅಂತಿಮ ವರದಿಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಮು.ಮಾ-1 ರಿಂದ 8ನ್ನು ನಾನು

ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ಸುಳ್ಳು ಅಂತಿಮ ವರದಿ ಸಲ್ಲಿಸಿ ಈ ದಿನ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯವಿಚಾರಣೆಯಲ್ಲಿರುವ ಸಂಗತಿಗಳು ಸುಳ್ಳು ಎಂದರೆ ಸರಿಯಲ್ಲ.

**ಮರುವಿಚಾರಣೆ: ಇಲ್ಲಾ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**ಪ್ರಧಾನ ಪ್ರ.ದ.ನ್ಯಾ.ದಂ. ಚಿಂಚೋಳಿ**